**<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>**

**<u>ಸತ್ರ ಮೊಕದ್ದಮೆ ಸಂಖ್ಯೆಃ 106/2021</u>**

ಪಿ.ಡಬ್ಲುಃ **10** ಸಿಡಬ್ಲುಃ **16**

ಸಾಕ್ಷಿಯ ಹೆಸರು : ಮಲ್ಲಿಕಾರ್ಜುನ

ತಂದೆಯಹೆಸರು : ರಾಮಯ್ಯ

ವಯಸ್ಸು : **58** ವರ್ಷ

ವೃತ್ತಿ : ಫಾರೆಸ್ಟ್‌ನಲ್ಲಿ ವಾಚರ್ ಕೆಲಸ

ವಾಸಸ್ಥಳ : ಮೋಕಾ ಗ್ರಾಮ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **20-07-2024**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಾನು ಮೋಕಾ ಕಾದಿಟ್ಟ ಅರಣ್ಯ ವೀಕ್ಷಕನೆಂದು ಕಳೆದ 6 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಚಾಸಾ-1 ನನ್ನ ಮೇಲಾಧಿಕಾರಿ .

ದಿಃ 28-07-2021 ರಂದು ನನು ಗಸ್ತಿನಲ್ಲಿದ್ದಾಗ ಮುಂಜಾನೆ 7-45 ಕ್ಕೆ ಮೋಕಾ ಫಾರೆಸ್ಟ ನಲ್ಲಿ ದಾಸರ ನಾಗೇನಹಳ್ಳಿಯ ಸರ್ವೆ ನಂ. 1 ರಲ್ಲಿ ಒಬ್ಬ ವ್ಯಕ್ತಿಯ ಮೃತ ದೇಹ ಕಂಡು ಬಂದಿತ್ತು . ಸದರಿ ವಿಷಯವನ್ನು ನಾನು ಚಾಸಾ-1 ರವರಿಗೆ ತಿಳಿಸಿದ್ದೆ. ಅವರು ಸ್ಥಳಕ್ಕೆ ಬಂದು ಪರಿಶೀಲಿಸಿ ನಂತರ ಠಾಣೆಗೆ ಹೋಗಿ ವಿಷಯ ತಿಳಿಸಿದರು. ಅಲ್ಲಿ ಆ ವ್ಯಕಿಯ ತಲೆಗೆ ಪೆಟ್ಟಾಗಿತ್ತು . ಆತ ಬೋರಾಗಿ ಬಿದ್ದಿದ್ದ . ಚಾಸಾ-1 ರವರು ಈ ಬಗ್ಗೆ ಪೊಲೀಸರಿಗೆ ದೂರನ್ನು ಕೊಟ್ಟಿದ್ದರು. ನಾನು ಈ ಎಲ್ಲಾ ವಿಷಯವನ್ನು ಪೊಲೀಸರ ಮುಂದೆ ತಿಳಿಸಿದ್ದೆ.

<u>ಪಾಟೀಸವಾಲು **1** ನೇ ಆರೋಪಿ ಪರವಾಗಿ ಶ್ರೀ ವೈ.ಕೆ ವಕೀಲರಿಂದಃ</u>

ನಾನು ಆ ದಿವಸ ಕರ್ತವ್ಯದ ಮೇಲೆ ಇದ್ದ ಬಗ್ಗೆ ದಾಖಲೆ ಕೊಟ್ಟಿಲ್ಲ. ನಾನು ಈ ಪ್ರಕರಣದ ಬಗ್ಗೆ ನನ್ನ ಮುಖ್ಯಾಧಿಕಾರಿಗಳಿಗೆ ಮಾತ್ರ ಹೇಳಿದ್ದೇನೆ. ಪೊಲೀಸರ ಮುಂದೆ

ನಾನು ಹೇಳಿಕೆಯನ್ನು ಕೊಟ್ಟಿಲ್ಲ. ಅಲ್ಲಿದ್ದ ವ್ಯಕ್ತಿಗೆ ಯಾರು ಏನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ.

ಪಾಟೀಸವಾಲು 2 ನೇ ಆರೋಪಿ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದಃ

ನನಗೆ ಓದಲು ಬರೆಯಲು ಬರುವುದಿಲ್ಲ. ಫಾರೆಸ್ಟ್ ವಾಚರ್ ಗಳು ದಿನದ **24** ಗಂಟೆ ಗಸ್ತಿನಲ್ಲಿ ಇರಬೇಕಾಗುತ್ತದೆ ಎಂದರೆ ಸರಿ. ಮೋಕಾ ಫಾರೆಸ್ಟ್ ನಲ್ಲಿ ಯಾರಾದರು ಒಳಗೆ ಬರಬೇಕಾದಲ್ಲಿ ಆಧಾರ್ ಕಾರ್ಡ್ ತೋರಿಸಿ ಬರಬೇಕು ಮತ್ತು ನಿರ್ದಿಷ್ಟ ಅವಧಿವರಗೆ ಮಾತ್ರ ಒಳಗೆ ಇರಬೇಕಾಗುತ್ತದೆ ಎಂದರೆ ಸರಿ. ಆ ದಿವಸ ಅರಣ್ಯದ ಒಳಗೆ ಯಾರು ಬಂದಿದ್ದರು ಎಂದು ಮತ್ತು ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಆ ದಿವಸ ಒಬ್ಬ ವ್ಯಕ್ತಿಯ ಹೆಣ ನೋಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ನಾನು ಹೇಳಿದಂತೆ ಅರಣ್ಯದಲ್ಲಿ ಯಾವುದೇ ವ್ಯಕ್ತಿಯ ಹೆಣ ಇರಲಿಲ್ಲ ಎಂದರೆ ಸರಿಯಲ್ಲ.

**(3 ನೇ ಆರೋಪಿ ಪರ ವಕೀಲರು ಸಾಕ್ಷಿಯ ಮೇಲಿನ ಪಾಟೀ ಸವಾಲನ್ನು ಅವಲಂಬಿರುತ್ತಾರೆ).**

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.